# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 43
2. ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸುವ ದಿನಾಂಕ : 13.02.2023
4. ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಸಿಂಥೆಟಿಕ್ ಡ್ರಗ್ಸ್ ವಹಿವಾಟು ವ್ಯಾಪಕವಾಗಿ ಹಬ್ಬುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಪ್ರಕರಣಗಳು ಒಳಗೊಂಡಂತೆ ಪೂರ್ಣ ಮಾಹಿತಿ ನೀಡುವುದು: | ರಾಜ್ಯದಲ್ಲಿ ಸಿಂಥೆಟಿಕ್ ಡ್ರಗ್ಸ್ ಪ್ರಕರಣಗಳು ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಕಳೆದ 2021, 2022 ಮತ್ತು 2023 (ಜನವರಿ, 31)ರ ವರೆಗೆ ವರದಿಯಾಗಿರುವ ಜಿಲ್ಲಾವಾರು ಪ್ರಕರಣಗಳ ಸಂಖ್ಯೆ ಮತ್ತು ವಶಪಡಿಸಿಕೊಂಡಿರುವ ಡ್ರಗ್ಸ್‌ನ ಪ್ರಮಾಣವನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |
| ಆ) | ರಾಜ್ಯದಲ್ಲಿ ಸಿಂಥೆಟಿಕ್ ಡ್ರಗ್ಸ್ ದಂಧೆ, ಮೊಬೈಲ್, ದೂರವಾಣಿ, ಇ-ಮೇಲ್ ಆ್ಯಪ್, ಇತರೆ ಸಾಮಾಜಿಕ ಮಾಧ್ಯಮಗಳ ಮೂಲಕ ನಡೆಯುತ್ತಿದ್ದು, ಈಗ ಡಾರ್ಕ್ ನೆಟ್ ರೂಪ ಪಡೆದಿದ್ದು, ಇದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು: (ಪೂರ್ಣ ಮಾಹಿತಿ ನೀಡುವುದು) | ಡ್ರಗ್ಸ್ ದಂದೆಯನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳ ವಿವರಗಳನ್ನು **ಅನುಬಂಧ-2**ರಲ್ಲಿ ಒದಗಿಸಿದೆ. |
| ಇ) | ರಾಜ್ಯದಲ್ಲಿ ಐಟಿ-ಬಿಟಿ ಕಂಪನಿಗಳ ಉದ್ಯೋಗಿಗಳು, ಶಾಲಾ-ಕಾಲೇಜು ವಿದ್ಯಾರ್ಥಿಗಳು, ಉದ್ಯಮಿಗಳು, ವ್ಯಾಪಾರಸ್ಥರು, ಸಿನಿ ತಾರೆಯರು ಸೇರಿದಂತೆ ಹಲವಾರು ಡ್ರಗ್ಸ್ ವ್ಯಸನಿಗಳಾಗಿ, ದೈಹಿಕವಾಗಿ ಮತ್ತು ಮಾನಸಿಕವಾಗಿ ಖಾಯಿಲೆಗಳಿಗೆ ಬಲಿಯಾಗುತ್ತಿದ್ದು, ರಾತ್ರಿ ಕ್ಲಬ್ ಮತ್ತು ಹೋಟೆಲ್‌ಗಳಂತಹ ಸ್ಥಳಗಳ ಮೇಲೆ ಸರ್ಕಾರ ನಿಗಾ ಇಟ್ಟಿದೆಯೇ? (ಹಾಗಿದ್ದಲ್ಲಿ ಪೂರ್ಣ ಮಾಹಿತಿ ನೀಡುವುದು) | ರಾಜ್ಯದ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ರಾತ್ರಿ ಕ್ಲಬ್, ಡಾನ್ಸ್‌ಬಾರ್, ಪಬ್, ರೆಸ್ಟೋರೆಂಟ್‌ಗಳಿಗೆ ಅನಿರೀಕ್ಷಿತ ದಾಳಿ ನಡೆಸಿ ಪರಿಶೀಲಿಸಲಾಗುತ್ತಿದ್ದು, ಯಾವುದೇ ಕಾನೂನು ಬಾಹಿರ ಕೃತ್ಯಗಳು ಕಂಡು ಬಂದಲ್ಲಿ ಕಾನೂನು ಕ್ರಮಕೈಗೊಳ್ಳಲಾಗುತ್ತಿದೆ ಹಾಗೂ ಮಾದಕ ವಸ್ತುಗಳ ಸೇವನೆ ಮಾಡುವವರ ವಿರುದ್ದವೂ ಕೂಡ 27(b) NDPS Act ಕಾಯ್ದೆ ಅಡಿ ಪ್ರಕರಣ ದಾಖಲಿಸಿ ಕ್ರಮ ಜರುಗಿಸಲಾಗುತ್ತಿದೆ. |

ಒಇ 4 ಪಿಎನ್‌ಡಿ 2023(ಇ)

(ಆರಗ ಜ್ಞಾನೇಂದ್ರ)
ಗೃಹ ಸಚಿವರು

## ಅನುಬಂಧ-1

### ವರದಿಯಾಗಿರುವ ಸಿಂಥೆಟಿಕ್ ಡ್ರಗ್ಸ್ ಪ್ರಕರಣಗಳು.

| ಕ್ರ. ಸಂ. | ಘಟಕದ ಹೆಸರು | 2021 | | 2022 | | 2023(Jan.31) | |
|---|---|---|---|---|---|---|---|
| | | ವರದಿ | ಸಿಂಥೆಟಿಕ್ ಡ್ರಗ್ಸ್ ಪ್ರಮಾಣ | ವರದಿ | ಸಿಂಥೆಟಿಕ್ ಡ್ರಗ್ಸ್ ಪ್ರಮಾಣ | ವರದಿ | ಸಿಂಥೆಟಿಕ್ ಡ್ರಗ್ಸ್ ಪ್ರಮಾಣ |
| 1 | ಬೆಂಗಳೂರು ನಗರ | 198 | 86.667 ಕೆ.ಜಿ | 4042 | 4228.44 ಕೆ.ಜಿ | 15 | 1.773 ಕೆ. ಜಿ |
| 2 | ಮೈಸೂರು ನಗರ | 3 | 0.6 ಗ್ರಾಂ | 3 | | 0 | |
| 3 | ಬೆಳಗಾವಿ ನಗರ | 0 | | 0 | | 0 | |
| 4 | ಹುಬ್ಬಳ್ಳಿ-ಧಾರವಾಡ | 1 | 0.51 ಗ್ರಾಂ | 0 | | 0 | |
| 5 | ಮಂಗಳೂರು ನಗರ | 0 | | 0 | | 0 | |
| 6 | ಕಲಬುರಗಿ ನಗರ | 0 | | 0 | | 0 | |
| 7 | ಬಾಗಲಕೋಟೆ | 0 | | 0 | | 0 | |
| 8 | ಬಳ್ಳಾರಿ | 0 | | 0 | | 0 | |
| 9 | ಬೆಳಗಾವಿ ಜಿಲ್ಲೆ | 0 | | 0 | | 0 | |
| 10 | ಬೆಂಗಳೂರು ಜಿಲ್ಲೆ | 1 | | 0 | | 0 | |
| 11 | ಬೀದರ್ | 0 | | 0 | | 0 | |
| 12 | ಚಾಮರಾಜನಗರ | 0 | | 0 | | 0 | |
| 13 | ಚಿಕ್ಕಬಳ್ಳಾಪುರ | 0 | | 0 | | 0 | |
| 14 | ಚಿಕ್ಕಮಗಳೂರು | 0 | | 1 | 12 ಗ್ರಾಂ | 0 | |
| 15 | ಚಿತ್ರದುರ್ಗ | 0 | | 0 | | 0 | |
| 16 | ದಕ್ಷಿಣ ಕನ್ನಡ | 0 | | 0 | | 0 | |
| 17 | ದಾವಣಗೆರೆ | 0 | | 0 | | 0 | |
| 18 | ಧಾರವಾಡ | 0 | | 0 | | 0 | |
| 19 | ಗದಗ್ | 0 | | 0 | | 0 | |
| 20 | ಹಾಸನ | 1 | 2 ಗ್ರಾಂ | 0 | | 0 | |
| 21 | ಹಾವೇರಿ | 0 | | 0 | | 0 | |
| 22 | ಕೆ.ಜಿ.ಎಫ್ | 0 | | 0 | | 0 | |
| 23 | ಕಲ್ಬುರ್ಗಿ ಜಿಲ್ಲೆ | 0 | | 0 | | 0 | |
| 24 | ಕರ್ನಾಟಕ ರೈಲ್ವೇಸ್ | 0 | | 0 | | 0 | |
| 25 | ಕೊಡಗು | 0 | | 0 | | 0 | |
| 26 | ಕೋಲಾರ | 0 | | 0 | | 0 | |
| 27 | ಕೊಪ್ಪಳ | 0 | | 0 | | 0 | |
| 28 | ಮಂಡ್ಯ | 0 | | 0 | | 0 | |
| 29 | ಮೈಸೂರು ಜಿಲ್ಲೆ | 0 | | 0 | | 0 | |
| 30 | ರಾಯಚೂರು | 0 | | 0 | | 0 | |
| 31 | ರಾಮನಗರ | 0 | | 0 | | 0 | |
| 32 | ಶಿವಮೊಗ್ಗ | 0 | | 0 | | 0 | |
| 33 | ತುಮಕೂರು | 0 | | 1 | 04.5 ಗ್ರಾಂ | 0 | |
| 34 | ಉಡುಪಿ | 4 | 795 ಗ್ರಾಂ | 8 | 199 ಗ್ರಾಂ | 0 | |
| 35 | ಉತ್ತರ ಕನ್ನಡ | 0 | | 0 | | 0 | |
| 36 | ವಿಜಯಪುರ | 0 | | 0 | | 0 | |
| 37 | ಯಾದಗಿರಿ | 0 | | 0 | | 0 | |
| 38 | ವಿಜಯನಗರ | 0 | | 0 | | 0 | |

## ಅನುಬಂಧ–2

**ರಾಜ್ಯದಲ್ಲಿ ಡ್ರಗ್ ದಂದೆಯನ್ನು ತಡೆಗಟ್ಟಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ:**

1. ಸಾರ್ವಜನಿಕರ ಅನುಕೂಲಕ್ಕಾಗಿ, ಟೋಲ್ ಫ್ರೀ ಸಂಖ್ಯೆ 1908 ದೂರವಾಣಿಯ ಮುಖಾಂತರ ಸಂಪರ್ಕಿಸಿ ಮಾಹಿತಿ ನೀಡುವ ಯೋಜನೆ ಪ್ರಾರಂಭಿಸಲಾಗಿದೆ. ಸಾರ್ವಜನಿಕರ ಗಮನ ಸೆಳೆಯಲು ಬ್ಯಾನರ್, ಪೋಸ್ಟರ್‌ಗಳನ್ನು ಜನ ಸಂದಣಿ ಇರುವ ಸ್ಥಳಗಳಲ್ಲಿ ಪ್ರದರ್ಶಿಸಿ ಕರಪತ್ರ ಹಂಚಲಾಗುತ್ತಿದೆ. ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಸಾಮಾಜಿಕ ಜಾಲ ತಾಣಗಳಲ್ಲಿ ಜಾಗೃತಿ ಚುಟುಕು ವಿಡಿಯೋಗಳ ಮೂಲಕ ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

2. ಮಾದಕ ವಸ್ತುಗಳ ಮಾರಾಟ ಜಾಲವನ್ನು ಪತ್ತೆಹಚ್ಚಿ ಅವರ ಮೊಬೈಲ್ ಸಿ.ಡಿ.ಆರ್. ಅನ್ನು ವಿಶ್ಲೇಷಿಸಿ ಮಾದಕ ವಸ್ತುಗಳ ಮಾರಾಟದ ಮೂಲದ ಬಗ್ಗೆ ಮಾಹಿತಿ ಸಂಗ್ರಹಿಸಿ ಕ್ರಮ ಜರುಗಿಸಲಾಗುತ್ತಿದೆ. ಕೊರಿಯರ್ಸ್/ಪೋಸ್ಟ್ ಮತ್ತು ಡಾರ್ಕ್‌ವೆಬ್ ಮೂಲಕ ಮಾದಕ ವಸ್ತುಗಳನ್ನು ಖರೀದಿಸುವವರ ಬಗ್ಗೆ ನಿಗಾವಹಿಸಿ ಕ್ರಮ ಜರುಗಿಸಲಾಗುತ್ತಿದೆ.

3. ಬಾರ್ ಮತ್ತು ರೆಸ್ಟೋರೆಂಟ್, ಕಾಫಿ–ಡೇ, ಪಬ್, ಡಾನ್ಸ್‌ಬಾರ್ ಯುವಕರು ಹೆಚ್ಚಾಗಿ ಸೇರುವ ಮುಂತಾದ ಸ್ಥಳಗಳು, ಶಾಲಾ ಕಾಲೇಜು ಆವರಣ, ಬಸ್ ನಿಲ್ದಾಣ ಇನ್ನಿತರೆ ಪ್ರದೇಶಗಳಲ್ಲಿ ಮಾದಕ ದ್ರವ್ಯ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಕಾನೂನಿನ ರೀತಿ ಕ್ರಮ ಜರುಗಿಸಲಾಗುತ್ತಿದೆ.

4. ಶಾಲಾ ಕಾಲೇಜುಗಳು, ವಿದೇಶಿಯರು ವಾಸಿಸುತ್ತಿರುವ ಪ್ರದೇಶಗಳು ಮತ್ತು ಕೊಳಚೆ ಪ್ರದೇಶಗಳಲ್ಲಿ ಸಾರ್ವಜನಿಕ ಸಭೆ, ಮೆರವಣಿಗೆಗಳನ್ನು ನಡೆಸುವುದರ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಲು ಮಾದಕ ವಸ್ತುಗಳ ಸೇವನೆ ವಿರುದ್ಧ ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

5. ಮಾದಕ ದ್ರವ್ಯದ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಶಾಲಾ–ಕಾಲೇಜುಗಳಲ್ಲಿ ಡ್ರಗ್ ಅವೇರ್‌ನೆಸ್ ಪ್ರೋಗ್ರಾಮನ್ನು ನಡೆಸಿ, ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಉಪನ್ಯಾಸದ ಮೂಲಕ ವಿವರವಾಗಿ ತಿಳುವಳಿಕೆ ನೀಡಿ ಜಾಗೃತಿ ಕಾರ್ಯಕ್ರಮ ಹಾಗೂ ಠಾಣಾ ಸರಹದ್ದಿನ ಬೀಟ್ ಮತ್ತು ಸಬ್–ಬೀಟ್‌ಗಳಲ್ಲಿ ಆಗ್ಗಿಂದಾಗ್ಗೆ ಸಭೆಯನ್ನು ನಡೆಸಿ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

6. ವಿದೇಶಿಯರು ವಾಸದ ಬಗ್ಗೆ ಮಾಹಿತಿಯನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗಳಿಗೆ ಒದಗಿಸುವಂತೆ ಈಗಾಗಲೇ ಸುತ್ತೋಲೆಗಳನ್ನು ಹೊರಡಿಸಲಾಗಿದೆ. ಮಾದಕ ವಸ್ತುಗಳ ಮಾರಾಟ/ಸೇವನೆಯ ಪ್ರಕರಣಗಳಲ್ಲಿ ವಿದೇಶಿ ಪ್ರಜೆಗಳು / ಆರೋಪಿಗಳಿಗೆ ಯಾವ ಮೂಲಗಳಿಂದ ಮಾದಕ ವಸ್ತುಗಳು ಸರಬರಾಜಾಗುತ್ತಿರುವ ಬಗ್ಗೆ ಸಂಪೂರ್ಣ ಮಾಹಿತಿ ಸಂಗ್ರಹಿಸಲು ಸೂಚಿಸಲಾಗಿದ್ದು, ವಿಶೇಷ ಕಾರ್ಯಚರಣೆಗಳನ್ನು ನಡೆಸಿ ಇಂತಹ ಕೃತ್ಯಗಳಲ್ಲಿ ತೊಡಗಿರುವ ವಿದೇಶಿಯರನ್ನು ದಸ್ತಗಿರಿ ಮಾಡಿ ಅವರುಗಳ ಪಾಸ್‌ಪೋರ್ಟ್‌ಗಳನ್ನು ಮುಟ್ಟುಗೋಲು ಹಾಕಿಕೊಂಡು ಕಠಿಣ ಕಾನೂನಿನ ಕ್ರಮ ಕೈಗೊಳ್ಳಲಾಗುತ್ತಿದೆ.

7. ಮಾದಕ ವಸ್ತುಗಳ ವ್ಯಸನಿಗಳನ್ನು ಗುರುತಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮುಖಾಂತರ ಡಿ–ಅಡಿಕ್ಷನ್ ಸೆಂಟರ್‌ಗಳಿಗೆ ಸೇರಿಸಲು ಕ್ರಮ ವಹಿಸಲಾಗುತ್ತಿದೆ. ಪದೇ ಪದೇ ಇಂತಹ ಕೃತ್ಯಗಳಲ್ಲಿ ತೊಡಗುವ ಡ್ರಗ್

ಪೆಡ್ಲರ್‌ಗಳ ವಿರುದ್ಧ **"Prevention of Illicit Traffic in Narcotics Drugs & Psychotropic" prevention detention act 1988**ರ ಅಡಿ ಪ್ರಕರಣ ದಾಖಲಿಸಿ ಕ್ರಮ ಜರುಗಿಸಲಾಗುತ್ತಿದೆ.

8. ಠಾಣಾ ಸರಹದ್ದುಗಳಲ್ಲಿ ಹೊಯ್ಸಳ, ಚೀತ್ತಾ, ಅಧಿಕಾರಿ ಮತ್ತು ಸಿಬ್ಬಂದಿಗಳು ಗಸ್ತಿನಲ್ಲಿರುವ ಸಮಯದಲ್ಲಿ ಶಾಲಾ, ಕಾಲೇಜುಗಳ ಬಳಿ ಸೂಕ್ಷ್ಮವಾಗಿ ಗಮನಿಸಿ ಅಪರಿಚಿತ ವ್ಯಕ್ತಿಗಳ ಮಾಹಿತಿ ಸಂಗ್ರಹಿಸುವಂತೆ ಸೂಚಿಸಲಾಗಿದೆ. ಮಾದಕ ದ್ರವ್ಯ ಪದಾರ್ಥಗಳ ವಹಿವಾಟನ್ನು ತಡೆಗಟ್ಟಲು ಹಾಗೂ ಪತ್ತೆ ಮಾಡಲು ಮತ್ತು ಹದಿಹರೆಯದ ಯುವಕ ಮತ್ತು ಯುವತಿಯರನ್ನು ಇಂತಹ ದುಶ್ಚಟಗಳಿಂದ ತಡೆಗಟ್ಟುವ ಸಲುವಾಗಿ ಎಲ್ಲಾ ರೀತಿಯ ಸಾಧ್ಯವಿರುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

*****